ದಿನಾಂಕಃ 21-06-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ- ವಾದಿ ಪರ ಶ್ರೀ ಎನ್ ಆರ್ ಬಿ ವಕೀಲರಿಂದ

ಈ ದಾವೆಯಲ್ಲಿನ ವಾದಿಯರು ಯಾವ ಪರಿಹಾರ ಕೋರಿ ದಾವೆ ದಾಖಲು ಮಾಇರುವ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ನಾನು ದಾವೆ ಆಸ್ತಿಯಲ್ಲಿನ ನಿವೇಶನವನ್ನು ನಾನು ಖರೀದಿ ಮಾಡಿರುವೆನು. ನನಗೆ ವಾದಿಯರು ಪರಿಚಯ ಇರುವದು. ವಾದಿಯರು ಮೃತ ವಿನಾಯಕ ಕುಲಕರ್ಣಿ ಇವರು ಮಕ್ಕಳು ಆಗಿರುವರು ಅಂದರೆ ಸರಿ. ಪ್ರತಿವಾದಿ 1 ರವರು ಸಹ ಮೃತ ವಿನಾಯಕ ಕುಲಕರ್ಣಿ ಇವರು ಮಗ ಆಗಬೇಕು ಅಂದರೆ ಸರಿ. ದಾವಾ ಆಸ್ತಿ ಮೂಲತಃ ಯಾರ ಹೆಸರಿನಲ್ಲಿ ಇತ್ತು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವದು. ಅದು ಗುರುರಾವ ಕುಲಕರ್ಣಿ, ದತ್ತಾತ್ರೇಯ ಕುಲಕರ್ಣಿ ಮತ್ತು ವಿನಾಯಕ ಕುಲಕರ್ಣಿ ಇವರ ಹೆಸರಿನಲ್ಲಿ ಇತ್ತು. ಗುರುರಾವ ಕುಲಕರ್ಣಿ ಮತ್ತು ದತ್ತಾತ್ರೇಯ ಕುಲಕರ್ಣಿ ಇವರು ವಿನಾಯಕ ಕುಲಕರ್ಣಿ ಇವರ ಚಿಕ್ಕಪ್ಪ ಆಗಬೇಕು ಅಂದರೆ ಸರಿ. ವಿನಾಯಕ ಕುಲಕರ್ಣಿಯ ತಂದೆ ಶಂಕರಾವ ಕುಲಕರ್ಣಿ ಹಾಗೂ ಗುರುರಾವ ಕುಲಕರ್ಣಿ ಮತ್ತು ದತ್ತಾತ್ರೇಯ ಕುಲಕರ್ಣಿ ಇವರ ಮಧ್ಯೆ ಕುಟುಂಬದ ಆಸ್ತಿಗಳಲ್ಲಿ ವಾಟ್ನಿಯಾದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿಯರ ಹಾಜರುಪಡಿಸಿರುವ ದಾಖಲಾತಿಗಳನ್ನು ನಾನು ನೋಡಿರುವೆನು. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನಿಪಿ 1 ರ ದಾಖಲೆ ಪ್ರಕಾರ ಸರ್ವೆ ನಂಬರ 164 ರ ಜಮೀನಿನಲ್ಲಿ ಗುರುರಾವ ಪಾಲಿಗೆ 27 ಗುಂಟೆ, ದತ್ತಾತ್ರೆಯ ಪಾಲಿಗೆ 26 ಗುಂಟೆ, ಹಾಗೂ ವಿನಾಯಕ ಕುಲಕರ್ಣಿರವರ ಪಾಲಿಗೆ 3 ಎಕರೆ 13 ಗುಂಟೆ ಜಮೀನು ನಮೂದು ಮಾಡಿರುವರು ಅಂದರೆ ಸರಿ. ಗುರುರಾವ , ದತ್ತಾತ್ರೆಯ ಪಾಲಿಗೆ ಬಂದಿರುವಂತಕ್ಕಂತ ಮೇಲಿನ ಆಸ್ತಿಗಳು ಈ ದಾವೆಯಲ್ಲಿ ದಾವಾ ಆಸ್ತಿಯನ್ನಾಗಿ ಸೇರಿಸಿರುವ ಅವಶ್ಯಕತೆ ಇಲ್ಲ ಅಂದರೆ ಸರಿಯಲ್ಲ. ರಿ ಸ ನಂ. 164 ರ ಜಮೀನಿನಲ್ಲಿ ಬಿನ್ ಶೇತ್ಕಿ ಪ್ಲಾಟ ನಂ. 1 ರಿಂದ 21 ಇವು ಗುರುರಾವ ಮತ್ತು ದತ್ತಾತ್ರೆಯ ಇವರ ಪಾಲಿಗೆ ಬಂದಿರುವಂತಹ ಆಸ್ತಿಗಳು ಅಂದರೆ ಸರಿಯಲ್ಲ.

ಗುರುರಾವ , ದತ್ತಾತ್ರೆಯ ಹಾಗೂ ವಿನಾಯಕ ಇವರ ಮಧ್ಯ ಅಪಸ್ತಾತ ವಾಟ್ನಿ ಆದ ನಂತರ ಪ್ಲಾಟ ನಂ. 1 ರಿಂದ 21 ಇವುಗಳನ್ನು ಗುರುರಾವ ಮತ್ತು ದತ್ತಾತ್ರೆಯ ವಹಿವಾಟು ಮಾಡುತ್ತಿದ್ದು ಹಾಗೂ ಪ್ಲಾಟ ನಂ. 22 ರಿಂದ 44 ಪ್ಲಾಟಗಳನು ವಿನಾಯಕರವರು ವಹಿವಾಟು ಮಾಡುತ್ತಿದ್ದರು ಅಂದರೆ ಸರಿಯಲ್ಲ. ಈ ಎಲ್ಲಾ ಪ್ಲಾಟಗಳನ್ನು ಈ 3 ಜನ ಸೇರಿ ಮಾಡುತ್ತಿದ್ದರು. ನಿಪಿ 1 ರ ದಾಖಲೆಯಲ್ಲಿ 3 ಜನ ಹಸೆರುಗಳು ಜಂಟಿಯಾಗಿ ನಮೂದು ಮಾಡಿದ್ದು ಅವರ ಪಾಲಿನ ಹಿಸ್ಸೆ ಕೂಡ ನಮೂದು ಮಾಡಿರುವರು ಅಂದರೆ ಸರಿ. ಆ ವಿಸ್ತೀರ್ಣ ಪ್ರಕಾರ ಕೂಡಿ ಮಾಡಿಕೊಂಡಿರುವರು ಅಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಅಂತಾ ಉತ್ತರಿಸುವರು. ಗುರುರಾವ ಕುಲಕರ್ಣಿ ಮತ್ತು ದತ್ತಾತ್ರೆಯ ಕುಲಕರ್ಣಿ ಇವರು ಹುರುಳಿಕೊಪ್ಪೆ ಮನೆಯಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿರುವರು ಅಂದರೆ ಸರಿ. ಅದೇ ರೀತಿ ಮೃತ ವಿನಾಯಕರಾವ ಕುಲಕರ್ಣಿ ಇವರ ಕುಟುಂಬವು ಸಹ ಪ್ರತ್ಯೇಕ ಮನೆಯಲ್ಲಿ ಈ ಗ್ರಾಮದಲ್ಲಿ ವಾಸವಾಗಿರುವರು ಅಂದರೆ ಸರಿ. ಈ ಕುಟುಂಬಗಳು ಪ್ರತ್ಯೇಕವಾಗಿ ಮನೆ ಮಾಡಿಕೊಂಡು ವಾಸಿಸುತ್ತಿರುವುದರಿಂದ ಕುಟುಂಬದ ಆಸ್ತಿಗಳಲ್ಲಯೂ ಸಹ ವಾಟ್ನಿ ಮಾಡಿಕೊಂಡು ಅವುಗಳ ಪ್ರತ್ಯೇಕ ವಹಿವಾಟು ಮಾಡುತ್ತಾ ಬಂದಿರುವರು ಅಂದರೆ ಸರಿಯಲ್ಲ. ನಿವೇಶನ ಸಂಖ್ಯೆ 22 ರಿಂದ 44 ರ ಜಮೀನು ವಿನಾಯಕರಾವ ಅವರಿಗೆ ಹಿರಿಯರಿಂದ ಬಂದಿರುವಂತಹ ಜಮೀನು ಆಗಿರುವುದು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ಮೃತ ವಿನಾಯಕರಾವ ಕುಲಕರ್ಣಿ ಹಾಗೂ ವಾದಿಯರು ಮತ್ತು 1 ನೇ ಪ್ರತಿವಾದಿ ಮಧ್ಯೆ ಯಾವುದೆ ಪಾಲು ವಾಟ್ನಿ ಇವತ್ತಿನವರಗೊ ಆಗಿರುವುದಿಲ್ಲ ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಅಂತಾ ಉತ್ತರಿಸುವರು. ವಿನಾಯಕರಾವ ಕುಲಕರ್ಣಿ ದಿನಾಂಕ 28.01.2012 ರಂದು ಮೃತಪಟ್ಟಿರುವರು ಅಂದರೆ ಸರಿ. ಇವರು ಮೃತಪಟ್ಟ ನಂತರ ಆತನ ಹೆಂಡತಿ ಮ್ಕಕಳು ಆತನ ಆಸ್ತಿಗೆ ವಾರಸುದಾರರು ಆಗುವವರು ಎಂದರೆ ಸಾಕ್ಷಿ ತನಗೆ ಮಾಹಿತಿ ಇಲ್ಲ ಅಂತಾ ಉತ್ತರಿಸುವರು. ನಮ್ಮ ಲಿಖಿತ ಪತ್ರ ವನ್ನು ಬರೆಸಿ ಹಾಕಲು ನಮ್ಮ ವಕೀಲರಿಗೆ ನಾನೇ

ಮಾಹಿತಿ ಕೊಟ್ಟಿದ್ದೇನೆ. ನನಗೆ ಕನ್ನಡ ಭಾಷೆ ಓದಿ ತಿಳಿದುಕೊಳ್ಳಲು ಅಧ್ಯೆಸಲು ಬರುತ್ತದೆ. ನನ್ನ ಲಿಖಿತ ಪತ್ರ ಆಂಗ್ಲ ಭಾಷೆಯಲ್ಲಿ ಇರುವದು ಅಂದರೆ ಸರಿ ನನ್ನ ಲಿಖಿತ ಪತ್ರದಲ್ಲಿ ಬರೆಸಿ ಹಾಕಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವದು. ವಿನಾಯಕರಾವ ಕುಲಕರ್ಣಿ ಮೃತಪಟ್ಟ ನಂತರ ದಾವಾ ನಿವೇಶನ ಸಂಖ್ಯೆ 22 ರಿಂದ 44 ಗಳನ್ನು ವಾದಿಯರು ಮತ್ತು 1 ನೇ ಪ್ರತಿವಾದಿ ಸಾಮೂಹಿಕ ಕಬ್ಜೆಯನ್ನು ಹೊಂದಿದ್ದರು ಅಂದರೆ ಸರಿಯಲ್ಲ. ಈ ನಿವೇಶನಗಳನ್ನು ಇವತ್ತಿನವರೆಗೂ ಇವರೇ ವಹಿವಾಟು ಮಾಡುತ್ತಿರುವರು ಅಂದರೆ ಸರಿಯಲ್ಲ. ನಾವು ಖರೀದಿ ಮಾಡಿರುವಂತಹ ನಿವೇಶನಗಳ ಮೃತ ವಿನಾಯಕ, ಗುರುರಾವ ,ಹಾಗೂ ದತ್ತಾತ್ರೇಯ ಕಾನೂನು ಬದ್ದವಾಗಿ ಮಾರಾಟ ಮಾಡಿರುವದರಿಂದ ಆ ಕಾರಣಕ್ಕಾಗಿ ವಾದಿಯರ ದಾವೆಯು ಕಾನುನಾನು ಬದ್ದವಾಗಿರುವುದಿಲ್ಲ. ನಾನು ಪ್ಲಾಟ ನಂ. 22 ಮತ್ತು 23 ನ್ನು ಖರೀದಿ ಮಾಡಿರುವೆನು. ಈ ನಿವೆಶೇನಗಳನ್ನು ನಾನು ಖರೀದಿ ಮಾಡುವ ಸಮಯದಲ್ಲಿ ವಾದಿ 2 , 3 ಮತ್ತು ಪ್ರತಿವಾದಿ 1 ರವರು ವಯಸ್ಕರಾಗಿರುವರು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಅಂತಾ ಉತ್ತರಿಸುವರು. ಈ ಖರೀದಿ ಪತ್ರ ಮೇಲೆ ಪ್ರತಿವಾದಿ 1 ಹಾಗೂ ವಾದಿ 2 ಮತ್ತು 3 ರವರ ಸಹಿಗಳನ್ನು ಪಡೆದುಕೊಳ್ಳಲು ನಮಗೆ ಯಾವುದೆ ತೊಂದರೆ ಇರಲಿಲ್ಲ. ವಾದಿಯರ ಹಕ್ಕನ್ನು ನಷ್ಟ ಪಡಿಸುವ ಸಲುವಾಗಿ ನಾನು ಅವರ ತಂದೆಯ ಕಡೆಯಿಂದ ನಿವೇಶನ 22 ಮತ್ತು 23 ಗಳನ್ನು ಖರೀದಿ ಮಾಡಿಕೊಂಡಿದ್ದೇನೆ ಅಂದರೆ ಸರಿಯಲ್ಲ. ಈ ನಿವೇಶನಗಳನ್ನು ಹುರಳಿಕೊಪ್ಪೆ ಗ್ರಾಮಕ್ಕೆ ಹೊಂದಿಕೊಂಡಿರುವವು ಅಂದರೆ ಸರಿ. ಈ ಆಸ್ತಿಯ ಮಾರುಕಟ್ಟೆಯ ಮೌಲ್ಯ ಹೆಚ್ಚಿಗೆ ಇರುವುದು ಅಂದರೆ ಸರಿಯಲ್ಲ. ಈ ಆಸ್ತಿಗಳನ್ನು ಖರೀದಿ ಮಾಡುವ ಸಮಯದಲ್ಲಿ ವಾದಿಯರ ಕುಟುಂಬಕ್ಕಾಗಲೀ ಮೃತ ವಿನಾಯಕರಾವ ಕುಲಕರ್ಣಿ ಅವರಿಗಾಗಲೀ ಹಣದ ಅವಶ್ಯಕತೆ ಇರಲ್ಲಿಲ್ಲ ಅಂದರೆ ಸರಿಯಲ್ಲ.

ಮುಂದಿನ ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳ ಸವಣೂರ).